

ಪ್ರಯತ್ನ ಮಾಡುತ್ತಾ ಪತ್ರಿಕೆಯನ್ನು ಕೈಗೆ ತೆಗೆದುಕೊಂಡಳು. ಅಷ್ಟರಲ್ಲಿ ಬೀಟ್ ಪೊಲೀಸ್ ಪೇದೆ 'ಏನಮ್ಮಾ ಹೇಗಿದೀರಿ' ಎಂದು ಕೇಳಿದ. ಆಗ ತಾನೇ ಕಟ್ಟಡಗಳ ಸಂದಿಗಳಿಂದ ಕಳ್ಳನಂತೆ ನುಗ್ಗಿಬಂದ ಬಿಸಿಲು ಅವಳು ತೊಟ್ಟಿದ್ದ ನಸುಗೆಂಪು ಬಣ್ಣದ ಟೀಶರ್ಟಿನ ಮೇಲೆ ಬಿದ್ದು ಮೋಹಕವಾಗಿ ಕಾಣತೊಡಗಿದಳು. 'ಹಾ ಚನ್ನಾಗಿದೀವಿ' ಎಂದ ಅವಳು ಮತ್ತೆ, 'ಇರಿ ನಿಮಗೆ ಅಂತ ನಮ್ಮ ವಿಜೀಪುರದ ಚಿಕ್ಕ ವೀರಣ್ಣ ಸ್ವೀಟ್ ಸ್ಟಾಲ್‌ನಿಂದ ಮೈಸೂರ್ ಪಾಕ್ ತರಿಸಿದ್ದೆ. ನೆನ್ನೆ ಬರ್‍ತೀರೇನೊ ಎಂದು ಕಾದೆ... ಇವತ್ತು ಬಂದ್ರಿ' ಎನ್ನುತ್ತಾ ಒಳಹೋದಳು. ಅಷ್ಟೇ ಬೇಗ ಆಚೆ ಬಂದವಳ ಕೈಯಲ್ಲಿ ಮೈಸೂರ್‌ಪಾಕಿನ ಬಾಕ್ಸ್ ಇತ್ತು. ಅದನ್ನು ಪೇದೆಯ ಕೈಗಿಡುತ್ತಾ ನಿಮ್ಮ ಸಾಹೇಬರಿಗೂ ಕೊಡಿ ಎಂದು ನುಡಿದಳು. ಅವನು 'ಒಡವೆಗಳ್ನ ಇನ್ನೂ ಮನೇಲೆ ಇಟ್ಕೊಂಡಿದೀರೊ ಹೇಂಗೆ? ಮತ್ತೊಂದ್ ಎಡವಟ್ಟು ಆಗೋ ಮೊದಲು ಬ್ಯಾಂಕಲ್ಲಿ ಇಟ್ಟುಬಿಡಿ' ಎಂದು ಎಚ್ಚರಿಸಿದನು. ಅವಳು ಮನೆಯ ಕಾಂಪೌಂಡಿನ ಒಳಗೆ ಏಳೆಂಟು ಕಡುಕೆಂಪು ಬಣ್ಣದ ಹೂಗಳನ್ನು ಬಿಟ್ಟಿರುವ ದಾಸವಾಳದ ಗಿಡದ ಕಡೆಗೆ ನೋಡುತ್ತಾ 'ಇವತ್ತು–ನಾಳೆ ಒಂದು ಮದುವೆ ಇದೆ. ಅದು ಮುಗಿದ ನಂತರ ಇಡ್ತೇವೆ ಸರ್' ಎಂದು ನುಡಿದಳು. ನಂತರ ಅವಳ ದೃಷ್ಟಿ ದಾಸವಾಳದ ಪಕ್ಕದಲ್ಲಿ ಮೂರಡಿಯಷ್ಟು ಬೆಳೆದು ನಿಂತಿರುವ ನಿಂಬೆ ಗಿಡದ ಮೇಲೆ ಬಿತ್ತು. ಅದು ತುಸು ಒಣಗಿದ ಹಾಗಿತ್ತು. ಜೊತೆಗೆ ಕ್ರಿಸ್‌ಮಸ್, ನೈದಿಲೆ, ಗುಲಾಬಿ ಮತ್ತಿತರ ಗಿಡಗಳು ಬಾಯಾರಿಕೆಯಿಂದ ಅವಳ ಕಡೆಗೇ ನೋಡಿದ ಹಾಗಾಯಿತು. ಅರ್ಧ ಗಂಟೆ ತಡೀರಿ ಆಮೇಲೆ ಬರ್‍ತೀನಿ ಎಂದುಕೊಳ್ಳುತ್ತಾ ಒಳನಡೆದಳು. 'ಬೆಂಗ್ಳೂರಲ್ಲಿ ಕಳ್ಳರ ಕಾಟ ಜಾಸ್ತಿ ಆಗಿದೆ... ಸ್ವಲ್ಪ ಹುಷಾರಾಗಿರಿ' ಎಂಬ ಪೇದೆಯ ದನಿ ಅವಳನ್ನು ಹಿಂಬಾಲಿಸಿತು.

ಪೇದೆಗೆ ಮದುವೆಯ ಬಗ್ಗೆ ಹೇಳುವ ಹೊತ್ತಿಗೆ ಅವಳಿಗೆ ಸುಗುಣಳ ನೆನಪಾಯಿತು. ತನಗಿಂತ ಒಂದು ವರ್ಷ ದೊಡ್ಡವಳು. ಸಂಬಂಧದಲ್ಲಿ ದೊಡ್ಡಮ್ಮನ ಮಗಳು. ಮೇಲೂರಿನವಳಾದ ಸುಗುಣಳನ್ನು ಚಿಂತಾಮಣಿ ಬಳಿಯ ಗೋಪಸಂದ್ರಕ್ಕೆ ಕೊಟ್ಟಿದ್ದರು. ವಿಜೀಪುರದವಳಾದ ರಮ್ಯಳನ್ನು ಅವಳ ತಂದೆ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್‌ಗೆ ಕೊಡಬೇಕೆಂದು ಹುಡುಕಾಡಿ ಸಾಕಷ್ಟು ವರೋಪಚಾರ ನೀಡಿ ಸುರೇಶನ ಜೊತೆಗೆ ಮದುವೆ ಮಾಡಿದ್ದರು. ಮದುವೆಯಾದ ಎಂಟು ವರ್ಷಕ್ಕೆ ಈಗಿರುವ ಮನೆಯನ್ನು ಕಟ್ಟಿಸಿದ್ದು. ಇನ್ನೂ ಸಂಪೂರ್ಣ ಮನೆಗಳು ಏಳದ ಬಡಾವಣೆ. ಅಲ್ಲಲ್ಲಿ ಚೆಲ್ಲಿದ ಹಾಗೆ ಕಾಣಿಸುವ ಮನೆಗಳಿರುವ ಆ ಟೆಲಿಕಾಮ್ ಬಡಾವಣೆ ಇರುವುದು ಅಮೃತಹಳ್ಳಿ ಮತ್ತು ಹೆಗಡೆನಗರದ ನಡುವಿಗೆ.

ಅವರು ಆರು ತಿಂಗಳ ಹಿಂದೆ ಸುಗುಣಳ ಮನೆಗೆ ಕುಟುಂಬ ಸಮೇತ ಹೋಗಿದ್ದುದು. ಅದೂ ಮದುವೆಗೆಂದು. ಅಂದು ಸುಗುಣಳ ಮನೆತುಂಬ ನೆಂಟರಿದ್ದರಾದ್ದರಿಂದ ಒಂದೆರಡು ಮಾತಾಡಿ ಬಂದಿದ್ದರಷ್ಟೆ. ಸುಗುಣಳು ಒಂದೆರಡು ದಿನ ಇರು ಎಂದು ಎಷ್ಟೇ ಬಲವಂತ ಮಾಡಿದರೂ ಒಪ್ಪದೆ ಹೊರಟುಬಂದಿದ್ದಳು. ಎರಡು ದಿನಗಳ ಹಿಂದೆ ಫೋನ್ ಮಾಡಿದ್ದ ಸುಗುಣ ಮದುವೆಗೆ ತಾನೂ ಬರುವುದಾಗಿ ತಿಳಿಸಿ ಎರಡು ದಿವಸ ರಮ್ಯಳ ಮನೆಯಲ್ಲೇ ಇರುವುದಾಗಿ ಹೇಳಿದ್ದಳು. ರಮ್ಯಳಿಗೆ ತನ್ನ ಸಕಲೈಶ್ವರ್ಯ, ಮುತ್ತಿನಂತ ಗಂಡ, ಮಕ್ಕಳು ಎಲ್ಲದರ ಬಗ್ಗೆಯೂ ಗಂಟೆಗಟ್ಟಲೆ ಹಂಚಿಕೊಳ್ಳಬಹುದೆಂದು ಖುಷಿಯಾಗಿದ್ದಳು. ಜೊತೆಗೆ ತನ್ನಲ್ಲಿ ಈ ಮೊದಲು ಇದ್ದ ಒಡವೆಗಳ ಜಾಗದಲ್ಲಿ ಸೇರಿಕೊಂಡಿರುವ ಹೊಸ ಒಡವೆಗಳ ಕುರಿತಾಗಿ ಕೇಳಿದರೆ ಏನು ಹೇಳುವುದು ಎಂಬ ಆತಂಕವೂ ಅವಳಲ್ಲಿತ್ತು. ಸುರೇಶನು ಯಾರ ಬಳಿಯೂ ಹೇಳಬಾರದೆಂದು ಎಚ್ಚರಿಸಿದ್ದ. ಹಾಗೆ ಹೇಳಬೇಕಾದ ತುರ್ತು ಬಂದರೂ ಏನಾದರೂ ಬೇರೆ ಕತೆ ಕಟ್ಟಿ ಹೇಳಬೇಕೆಂದು ತಿಳಿಸಿದ್ದ. ಒಂದು ವೇಳೆ ಸುಗುಣಳು ಕೇಳಿದರೆ ವಾಸ್ತು ನಿಪುಣರೊಬ್ಬರು ತಮ್ಮಲ್ಲಿರುವ ಒಡವೆಗಳನ್ನು ಕರಗಿಸಿ ಬೇರೆ ತರನಾದ ಒಡವೆಗಳನ್ನು ಮಾಡಿಸಿಕೊಳ್ಳಬೇಕು; ಇಲ್ಲವೆಂದಲ್ಲಿ ಮನೆಯಲ್ಲಿರುವ ಲಕ್ಷ್ಮೀದೇವಿಗೆ ಶನಿಕಾಟವಿದೆಯೆಂದು ತಿಳಿಸಿದ್ದರು... ಹಾಗಾಗಿ ಮೊದಲಿನ ಒಡವೆಗಳನ್ನು ಕರಗಿಸಿ ಈ ಹೊಸ ಚಂದ್ರಹಾರ, ಮೂರೆಳೆ ಸರ, ಬಳೆ, ಕಿವಿಯೋಲೆ... ಮೊದಲಾಗಿ ಮಾಡಿಸಿಕೊಂಡಿದ್ದು ಎಂದು ಹೇಳಿದರಾಯಿತೆಂಬ ಉತ್ತರ ಅವಳಲ್ಲಿ ಇತ್ತು. ಹೀಗಿದ್ದರೂ ಜೊತೆಯಲ್ಲೇ ಬೆಳೆದ ಅಕ್ಕ, ಗೆಳತಿ ಎಲ್ಲವೂ ಆಗಿರುವ ಅವಳಲ್ಲಿ ಸುಳ್ಳು ಹೇಳುವುದಾದರು ಹೇಗೆ? ಒಂದು ವೇಳೆ ಹೇಳಿದರೂ ಮುಂದೊಂದು ದಿನ ವಿಷಯ ಗೊತ್ತಾಗಿಬಿಟ್ಟರೆ? ಎಂಬ ಪ್ರಶ್ನೆಗಳು, ಗೊಂದಲಗಳು ಅಡುಗೆ ಮನೆಯ ಜಿರಳೆಗಳಂತೆ ಕಾಡುತ್ತಲೇ ಇವೆ.

ತಾವಿರುವ ಬೀದಿಯಲ್ಲಿ ಬಹುತೇಕ ಎಲ್ಲರಿಗೂ ತಮ್ಮ ಮನೆಯಲ್ಲಿ ಕಳ್ಳತನವಾಗಿರುವ ವಿಷಯ ಗೊತ್ತಾಗಿ ಹೋಗಿದೆ. ಅವರಲ್ಲಿ ಯಾರಾದರೊಬ್ಬರು ಸುಗುಣಳ ಸಂಪರ್ಕಕ್ಕೆ ಸಿಕ್ಕಿ ವಿಷಯ ಗೊತ್ತಾಗಿ ಹೋದರೆ? ಹಾಗಾಗಲಾರದು. ಈ ಮನೆ ಕಟ್ಟಿಸಿ ಎರಡು ವರ್ಷಗಳಾಗಿದೆ. ಇದುವರೆಗೂ ಅವಳು ತಮ್ಮ ಮನೆಗೆ ಬಂದಿರುವುದು ಎರಡು ಬಾರಿಯಷ್ಟೆ. ಗೃಹಪ್ರವೇಶವಾದಾಗ, ಮತ್ತೆ ವರ್ಷದ ಹಿಂದೆ. ಅದೂ ಹೀಗೆ ಬಂದು ಹಾಗೆ ಹೋದದ್ದು. ಹಾಗಾಗಿ ಇಲ್ಲಿ ಯಾರೊಬ್ಬರ ಪರಿಚಯವೂ ಅವಳಿಗಿರಲಾರದು. ಒಂದು ವೇಳೆ ಗೊತ್ತಾದರೂ ಇರುವ ವಿಷಯ ತಿಳಿಸಿ ಯಾರಲ್ಲಿಯೂ ಹೇಳದಿರಲು ಕೇಳಿಕೊಂಡರಾಯಿತು ಎಂದುಕೊಂಡು ಅಡುಗೆಮನೆಗೆ ನಡೆದಳು.

ಅವಳು ಅಡುಗೆ ಮನೆಗೆ ಹೋಗುವಷ್ಟರಲ್ಲಿ ಅಲ್ಲಿಯೇ ಸ್ಲ್ಯಾಬ್ ಮೇಲೆ ಇಟ್ಟಿದ್ದ ಮೊಬೈಲಿಗೆ ವಾಟ್ಸ್ ಆಪ್ ಸಂದೇಶ ಬಂದ ಹಾಗಾಯಿತು. ಅದರ ಪರದೆಯ ಮೇಲೆ ತೋರುಬೆರಳಿನಿಂದ ಸ್ವೈಪ್ ಮಾಡಿ ನಂತರ ಸ್ಕ್ರೀನ್ ಲಾಕ್ ಕೋಡ್ ಹೊಡೆದು ಸಂದೇಶದ ಒಳಹೊಕ್ಕಳು. ಸುಗುಣಳು ಕಳಿಸಿರುವ ಸಂದೇಶವಾಗಿತ್ತು. ಮಧ್ಯಾಹ್ನ ಊಟದ ಹೊತ್ತಿಗೆ ಬರುವುದಾಗಿ ತಿಳಿಸಿದ್ದಳು. 'ಓಕೆ, ವೆಲ್ಕಮ್' ಎಂಬ ಮರು ಸಂದೇಶ ಕಳಿಸಿ ಹಿತವೆನಿಸುವ ನಗುವನ್ನು ತುಟಿಯ ಮೇಲೆ ಹೊದ್ದು ಮೊಬೈಲನ್ನು ಅಲ್ಲಿಯೇ ತನ್ನ ಎಡಭಾಗಕ್ಕೆ ಸ್ಲ್ಯಾಬ್ ಮೇಲಿದ್ದ ವೋವನ್ ಮೇಲಿಟ್ಟಳು. ಮತ್ತೆ ವಾಷ್ ಬೇಸನ್ನಿನ ಬಳಿ ನಡೆದಳು. ಬೇಡ ಬೇಡವೆಂದರೂ ಅವಳ ದೃಷ್ಟಿ ಕಿಟಕಿಯಿಂದ ತೂರಿ ಆಚೆ ಇಣುಕಿತು. ಖಾಲಿ ಸೈಟಿನಲ್ಲಿ ಎರಡು ನಾಯಿಮರಿಗಳು ಆಟವಾಡುತ್ತಿದ್ದವು. ಒತ್ತೊತ್ತಾಗಿ ಆಳೆತ್ತರಕ್ಕೆ ಬೆಳೆದಿದ್ದ ಅರಳುಗಿಡಗಳನ್ನು ಎರಡು ತಿಂಗಳ ಹಿಂದೆ